# ಸೂಕ್ತಿಪ್ರಭ

**ಈ** ಶರೀರಕ್ಕೆ ನೀವು ಹೆಚ್ಚು ಆಹಾರ ನೀಡಿದರೆ ಅದು ನಿಮಗೆ ಹೆಚ್ಚು ಪ್ರತಿಫಲ ನೀಡಲಾರದು. ಆದರೆ, ನೀವು ಅದಕ್ಕೆ ಕಡಿಮೆ ಆಹಾರ ನೀಡಿದರೆ ಅದು ನಿಮಗೆ ಹೆಚ್ಚು ಪ್ರತಿಫಲ ನೀಡುವುದು.

**ಈ** ವಿಷಯ ನನಗೆ ಗೊತ್ತಿಲ್ಲ ಎಂದು ಒಪ್ಪಿಕೊಂಡಾಗ ಅದನ್ನು ತಿಳಿಯಬೇಕೆಂಬ ಆಸಕ್ತಿ ಮೂಡುತ್ತದೆ.

**ಪ್ರ**ತಿಯೊಂದು ಕ್ರಿಯೆಯನ್ನೂ ಸಮಸ್ಯೆಯೆಂದು ಕೆಲವರು ಭಾವಿಸಿದರೆ, ಕ್ರಿಯೆಗಳಿಂದ ಪರಿಹಾರವೂ ಇದೆ ಎಂದು ಮತ್ತೆ ಕೆಲವರು ಭಾವಿಸುತ್ತಾರೆ. ಪರಿಹಾರವನ್ನೇ ಎಲ್ಲೆಡೆ ಕಾಣುವ ಗುಂಪಿಗೆ ಸೇರೋಣ.

**ಜ**ನ ನಿಮ್ಮನ್ನು ಗಮನಿಸಬೇಕೆಂದಿದ್ದರೆ, ಎದ್ದು ನಿಲ್ಲಿ. ಜನ ನಿಮ್ಮನ್ನು ಆಲಿಸಬೇಕೆಂದಿದ್ದರೆ, ಮಾತನಾಡಿ. ಜನ ನಿಮ್ಮನ್ನು ಮೆಚ್ಚಬೇಕೆಂದಿದ್ದರೆ, ಸುಮ್ಮನಿರಿ.

**ಮಾ**ನವ ಸ್ವತಃ ನೇರವಾಗಿ ನಿಲ್ಲಬೇಕು, ಇತರರ ಸಹಾಯದಿಂದಲ್ಲ.

**ಸ**ದಾ ಮತ್ತಷ್ಟು ಬೇಕೆಂದು ಬಯಸುವ ಧನಿಕನೇ ನಿಜವಾದ ಬಡವ.

**ಕೇ**ವಲ ಮನುಷ್ಯನಿಗೆ ಮಾತ್ರ ತನ್ನನ್ನು ಹಾಗೂ ತನ್ನ ಸುತ್ತಲೂ ಇರುವ ಪ್ರಪಂಚವನ್ನು ನೋಡಿ ನಗಲು ಸಾಧ್ಯ. ಭಗವಂತನ ಸೃಷ್ಟಿಯಲ್ಲಿ ಅವನೊಬ್ಬನಿಗೇ ನಗುವ ಸಾಮರ್ಥ್ಯವಿರುವುದು.

**ಬಿ**ಗಿಹಗ್ಗದ ಮೇಲಿನ ನಡಿಗೆಯಂತಿರುವ ಮುಗ್ಗಟ್ಟಿನ ಈ ಜೀವನದಲ್ಲಿ ಹಾಸ್ಯಪ್ರಜ್ಞೆಯೇ ಊರುಗೋಲು.

**ನಾ**ವು ಮಾಡುವ ಕ್ರಿಯೆಗಳು ಕಾಲವೆಂಬ ಸಾಗರಕ್ಕೆ ಎಸೆದ ಕಲ್ಲುಗಳಂತೆ. ಅವು ಕಾಣಿಸದೇ ಹೋದರೂ ಅವು ಉಂಟುಮಾಡುವ ತರಂಗಗಳು ಅನಂತ ಕಾಲ ಉಳಿಯುತ್ತವೆ.

**ಕ**ಲಿಯುವ ಪ್ರಕ್ರಿಯೆಯ ಪ್ರತಿಯೊಂದು ಹಂತದಲ್ಲೂ ನಾವು ಏನನ್ನಾದರೂ ತ್ಯಾಗ ಮಾಡಬೇಕಾಗುತ್ತದೆ. ಬಹಳ ಹಿಂದಿನಿಂದಲೂ ತಿಳಿದಿರುವ, ಜೀವನದುದ್ದಕ್ಕೂ ನಂಬಿರುವ ಧೋರಣೆಗಳನ್ನೂ ಸಹ.

**ಪಂ**ಜರ ಚಿಕ್ಕದಾದಷ್ಟೂ ಮುಕ್ತಿಯು ಹೆಚ್ಚು ಸವಿಯೆನಿಸುವುದು.

**ತ**ನ್ನ ಮೇಲೆ ಸ್ವತಃ ಪ್ರಭುತ್ವವಿಲ್ಲದ ಯಾವ ಮನುಷ್ಯನೂ ಸ್ವತಂತ್ರನಲ್ಲ.

**–ಸಂಗ್ರಹ**

# ಪ್ರಾರ್ಥನೆ

**(ಯಾಮುನಾಚಾರ್ಯರ ರಚನೆಯಿಂದ)**

**ಕಾಂತಸ್ತೇ ಪುರುಷೋತ್ತಮಃ ಫಣಿಪತಿಃ**
**ಶಯ್ಯಾಽಽಸನಂ ವಾಹನಂ ।**
**ವೇದಾತ್ಮಾ ವಿಹಗೇಶ್ವರೋ ಯವನಿಕಾ**
**ಮಾಯಾ ಜಗನ್ಮೋಹಿನೀ ।**
**ಬ್ರಹ್ಮೇಶಾದಿ–ಸುರವ್ರಜಸ್ಸದಯಿತಸ್ತ್ವದ್ದಾಸ–ದಾಸೀಗಣಃ**
**ಶ್ರೀರಿತ್ಯೇವ ಚ ನಾಮ ತೇ ಭಗವತಿ ಬ್ರೂಮಃ**
**ಕಥಂ ತ್ವಾಂ ವಯಮ್ ॥**

ನಿನಗೆ ಕಾಂತನು ಪುರುಷೋತ್ತಮನು; ಹಾಸಿಗೆ ಮತ್ತು ಆಸನ ನಾಗರಾಜನಾದ ಆದಿಶೇಷ; ವಾಹನವೋ ವೇದಗಳಿಗೆ ಆತ್ಮನಾದ, ಪಕ್ಷಿಶ್ರೇಷ್ಠನಾದ ಗರುಡ; ಜಗತ್ತನ್ನೇ ಮರುಳು ಮಾಡುವ ಮಾಯೆ ನಿನ್ನ ಪರದೆ; ನಿನ್ನ ಊಳಿಗದವರು ಪತ್ನೀಸಮೇತರಾದ ಬ್ರಹ್ಮ, ಶಿವ ಮೊದಲಾದ ದೇವತಾ ಸಮೂಹ. ಇದರ ಮೇಲೆ ನಿನ್ನ ಹೆಸರೇ 'ಶ್ರೀ' ಎಂದು; ಇಂತಹ ನಿನ್ನನ್ನು ಅಮ್ಮ ಭಗವತಿ! ನಾವು ಹೇಗೆ ತಾನೆ ಸ್ತುತಿಸಬಲ್ಲೆವು?

**ಯಸ್ಯಾಸ್ತೇ ಮಹಿಮಾನಮಾತ್ಮನ ಇವ**
**ತ್ವದ್ವಲ್ಲಭೋಽಪಿ ಪ್ರಭುಃ**
**ನಾಲಂ ಮಾತುಮಿಯತ್ತಯಾ ನಿರವಧಿಂ**
**ನಿತ್ಯಾನುಕೂಲಂ ಸ್ವತಃ ।**
**ತಾಂ ತ್ವಾಂ ದಾಸ ಇತಿ ಪ್ರಪನ್ನ ಇತಿ ಚ**
**ಸ್ತೋಷ್ಯಾಮ್ಯಹಂ ನಿರ್ಭಯೋ**
**ಲೋಕೈಕೇಶ್ವರಿ ಲೋಕನಾಥ–ದಯಿತೇ**
**ದಾಂತೇ ದಯಾಂ ತೇ ವಿದನ್ ॥**

ಸರ್ವಜ್ಞನಾದ ಪ್ರಭುವು ನಿನ್ನ ಇನಿಯನಾಗಿದ್ದರೂ, ತನ್ನ ಮಹಿಮೆಯಂತೆಯೆ, ಎಲ್ಲೆ ಇಲ್ಲದ ಸ್ವತಃ ನಿತ್ಯಾನುಕೂಲವಾದ ನಿನ್ನ ಮಹಿಮೆಯನ್ನು ಇಷ್ಟೇ ಎಂದು ಅಳೆಯಲಾರನು; ಅಂತಹ ನಿನ್ನನ್ನು ಹೇ ಲೋಕೈಕೇಶ್ವರಿ, ಲೋಕದೊಡೆಯನ ಪ್ರಿಯಳೆ, ನಿನಗೆ ಶರಣಾಗತರ ಮೇಲಿರುವ ದಯೆಯನ್ನು ತಿಳಿದವನಾಗಿ, ನಾನು ನಿನ್ನ ದಾಸನೆಂದು, ಪ್ರಪನ್ನನೆಂದು, ಭಯವಿಲ್ಲದೆ ಸ್ತೋತ್ರ ಮಾಡುತ್ತೇನೆ.